# ಪೋಗುವುದುಚಿತವೆ ಮಾಧವ ಮಧುರೆಗೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 381.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Prof. S.K. Ramachandra Rao and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
3. **Note:** Singer has followed these lyrics.

ರಾಗ: ದ್ವಿಜಾವಂತಿ ತಾಳ: ಆದಿ

ಪೋಗುವುದುಚಿತವೇ ಮಾಧವ ಮಧುರೆಗೆ
ಬಾಗುವೆ ಎಲೋ ನಿನಗೆ
ನಾಗಶಯನ ನಿನ್ನಗಲಿ ಒಂದು ಕ್ಷಣ
ಹೇಗೆ ಸೈರಿಸುವೆವೋ ಆಗಮನುತ ಕೃಷ್ಣ ॥ ಪ ॥

ಅಕ್ರೂರನೆಂಬವನಿಲ್ಲಿಗೇಕೆ ಬಂದ
ಚಕ್ರಧರಗೂ ನಮಗೂ
ಸತ್ಕ್ರೀಡೆಗಳನೆಲ್ಲಾ ಕೆಡಿಸಬೇಕೆನುತಲಿ
ವಕ್ರನಂದದಲಿ ಬಂದು
ಚಕ್ರಧರನೆ ಪೋಗಬೇಡ ನೀ ಮಧುರೆಗೆ
ಅಕ್ಕರದಿಂದಲಿ ಅಭಯ ಕೊಡೆಲೋ ಕೃಷ್ಣ ॥ 1 ॥

ಹುಟ್ಟಿಸಿದವರನು ಭ್ರಷ್ಟ ಮಾಡುವರೇನೋ
ಕೃಷ್ಣರಾಯನೆ ನೀನು
ಎಷ್ಟು ಹೇಳಿದರೊಂದಿಷ್ಟು ದಯಬಾರದೆ ಬೆ-
ನ್ನಟ್ಟಿದಲ್ಲದೆ ಬಿಡೆವೋ
ಕೃಷ್ಣಯ್ಯ ನಿನ್ನೊಳು ಇಷ್ಟು ಗುಣಂಗಳ
ಭ್ರಷ್ಟವ ಮಾಡದೆ ಕೃಷ್ಣರಾಯನೆ ಬೇಗ ॥ 2 ॥

ಮಾರನ ಬಾಧೆಗೆ ಅಗಲಿ ನೀ ಮಧುರಾ
ಪುರಕಾಗಿ ಹೋಗುವರೆ
ಸೇರಿದವರನೆಲ್ಲಾ ಮೀರಿ ನೀ ಪೋದರೆ
ಯಾರೆಲೋ ಗತಿ ನಮಗೆ
ವರದ ಶ್ರೀ ಪುರಂದರ ವಿಠಲ ರಾಯನೆ
ಸೆರಗೊಡ್ಡಿ ಬೇಡುವೆವೋ ನಿಲ್ಲು ನಿಲ್ಲೆಲೋ ಕೃಷ್ಣ ॥ 3 ॥

**Classification:** Keerthane
**Ankita:** sri purandara vittala
**Location:** NA
**Category:** Krishna Stuti, bhakti
**Sub-Category:** bhakti, Mathura, Madhava, Krishna, akrura, huttu, daya, manmatha,
**Pravachana:** NA
**Explanation:** NA